Date: 01-04-2025 OS No. 159/2021

( PW - 1 )

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ- 1ನೇ ಪ್ರತಿವಾದಿಯ ಪರ ಶ್ರೀಮತಿ ಎಮ್.ಕೆ.ಕೆ. ವಕೀಲರಿಂದಃ

ನಾನು 1ನೇ ತರಗತಿ ಓದಿದ್ದೇನೆ. ನಮ್ಮ ಕುಟುಂಬದ ಮೂಲ ಪುರಷ ನನ್ನ ತಂದೆ ಅಡಿವೆಪ್ಪ ಇರುತ್ತಾನೆ. ನನ್ನ ತಾಯಿ ರತ್ನವ್ವ ನನ್ನ ತಂದೆಯ ಮೊದಲನೆ ಹೆಂಡತಿ ಇರುತ್ತಾಳೆ. ನನ್ನ ತಂದೆ-ತಾಯಿಗೆ ನಾವು ಮೂರು ಜನ ಹೆಣ್ಣು ಮಕ್ಕಳು, ಅವರೆಂದರೆ 1) ಶಿವಲಿಂಗವ್ವ, 2) ಜಯಶ್ರೀ ಮತ್ತು3) ನಾನು ಪಾರ್ವತಿ ಇರುತ್ತೇವೆ. ದಾವೆದ ಪರಿಶಿಷ್ಟ 'ಅ' ಮತ್ತು 'ಬ' ಆಸ್ತಿಗಳು ನಮ್ಮ ಹಿರಿಯರಿಂದ ಬಂದ ಆಸ್ತಿಗಳು ಅಂದರೆ ನಿಜ. ದಾವೆದ ಆಸ್ತಿಗಳನ್ನು ನಾವು ಮತ್ತು ಪ್ರತಿವಾದಿಯರ ಒಟ್ಟಿಗೆ ಕಬ್ಜಾ ವಹಿವಾಟಿಯಲ್ಲಿದ್ದು, ಸಾಗು ಒಟ್ಟಿಗೆ ಮಾಡುತ್ತೇವೆ. ದಾವೆದ ಪರಿಶಿಷ್ಟ 'ಬ' ಆಸ್ತಿಯಾದ ಕಂಗ್ರಾಳಿ ಗ್ರಾಮದ ಜಿಪಿ ನಂ.1177ನೇದ್ದನ್ನು ದಾವೆದ ಶೆಡ್ಯೂಲ್ 'ಅ' ಆಸ್ತಿಗಳ ಆದಾಯ ಮತ್ತು ನನ್ನ ತಂದೆಯ ನಿವೃತ್ತಿಯಿಂದ ಬಂದ ಹಣದಿಂದ ಬಂದ ಪ್ರತಿವಾದಿ ನಂ.3 ಮತ್ತು 4 ಇವರ ಹೆಸರಿನಲ್ಲಿ ಖರೀದಿಸಿರುತ್ತಾರೆ ಅಂದರೆ ನಿಜ. ದಾವೆದ ಆಸ್ತಿಗಳಲ್ಲಿ ನನ್ನ ತಾಯಿಗು ಪಾಲು ಇದೆ ಅಂದರೆ ನಿಜ.

ಪಾಟೀ ಸವಾಲುಃ 2 ರಿಂದ 4ನೇ ಪ್ರತಿವಾದಿಯರಿಂದಃ- 3 ಮತ್ತು 4ನೇ ಪ್ರತಿವಾದಿಯರು ಮತ್ತು ಎಎಮ್‌ವಿ ವಕೀಲರನ್ನು ಕರೆಸಲಾಯಿತು, ಗೈರು ಹಾಜರಿದ್ದಾರೆ, ಆದ್ದರಿಂದ ಅವರ ಪರ ಪಾಟೀಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/- 01-04-2025

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.